ಮಂತ್ರಿಗಳಾದಂತಹ ಪ್ರಥಮದಲ್ಲಿ ನಮ್ಮ ಜಿಲ್ಲೆಗೆ ಬರುವಂತಹ ಸಂದರ್ಭದಲ್ಲಿ ಈ ಬೈಪಾಸ್ ರಸ್ತೆಗೆ ಅಡಿಗಲ್ಲು ಹಾಕಿ ಮತ್ತೆ ಮುಂದುವರಿಯಬೇಕೆಂದು ಕೇಳಿಕೊಂಡಿದ್ದೆ ಅದಕ್ಕೆ ಅವರು ಆಗ ಒಪ್ಪಿ ಕೊಂಡಿದ್ದರು. ಆದ್ದರಿಂದ ನಮ್ಮ ಜಿಲ್ಲೆಗೆ ಯಾವಾಗ ಪ್ರಥಮ ಪ್ರವಾಸ ಕಾರ್ಯಕ್ರಮವನ್ನು ಹಾಕಿ ಕೊಳ್ಳುತ್ತೀರಿ ಎಂಬುದನ್ನು ತಿಳಿಸಬೇಕು.

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಸನ್ಮಾನ್ಯ ಸದಸ್ಯರು ಒತ್ತಾಯ ಮಾಡಿದ್ದು ನಿಜ. ಕೆಲಸದ ಒತ್ತಡದಿಂದ ಆ ಜಿಲ್ಲೆಗೆ ಹೋಗುವುದಕ್ಕಾಗಲಿಲ್ಲ. ಈ ಅಧಿವೇಶನ ಮುಗಿದ ನಂತರ ಆ ಜಿಲ್ಲೆಯಲ್ಲಿ ಪ್ರವಾಸ ಮಾಡುತ್ತೇನೆ. ೨೯ ಎಕರೆ ಭೂಮಿ ಭೂ ಸ್ವಾಧೀನ ಆಗಬೇಕಾಗಿತ್ತು. ಅದು ವಿವಿಧ ಹಂತದಲ್ಲಿತ್ತು. ಈಗ ಅದಕ್ಕೆ ೧೫ ಲಕ್ಷ ರೂಪಾಯಿಗಳು ಈಗಾಗಲೇ ಖರ್ಚಾಗಿದೆ. ಇದಕ್ಕೆ ಒಟ್ಟು ೨೧ ಲಕ್ಷ ರೂಪಾಯಿಗಳು ಬೇಕಾಗಿದೆ. ಉಳಿದ ಹಣವನ್ನು ಶೀಘ್ರದಲ್ಲಿ ಕೊಡುತ್ತೇವೆ. ಆ ಭೂಮಿಯನ್ನು ಈಗಾಗಲೇ ಸ್ವಾಧೀನ ತೆಗೆದುಕೊಂಡಿದ್ದೇವೆ. ಅವರಿಗೆ ಶೀಘ್ರದಲ್ಲಿಯೇ ಪರಿಹಾರವನ್ನು ಕೊಡುತ್ತೇವೆ. ಬೈಪಾಸ್ ರಸ್ತೆ ನಿರ್ಮಾಣಕ್ಕೆ ಬೇಕಾದಂತಹ ಎಸ್ಟಿಮೇಟ್ಸ್, ಡಿಸೈನ್ ಅನ್ನು ತಯಾರು ಮಾಡಿ ಮಂಜೂರಾತಿಗೆಂದು ಕೇಂದ್ರಕ್ಕೆ ಕಳಿಸಿದ್ದೇನೆ. ಮಂಜೂರಾತಿ ಶೀಘ್ರದಲ್ಲಿ ಬರುತ್ತದೆ ಎಂಬ ನಿರೀಕ್ಷೆಯಲ್ಲಿದ್ದೇವೆ. ಬಂದನಂತರ ಆ ಕೆಲಸವನ್ನು ಪ್ರಾರಂಭ ಮಾಡುತ್ತೇವೆ.

ಶ್ರೀ ವಿನಯಕುಮಾರ್ ಸೊರ್ಕೆ.—ಮಾನ್ಯ ಅಧ್ಯಕ್ಷರೆ, ಇದು ರಾಜ್ಯಸರ್ಕಾರದ ರಸ್ತೆಯಾಗಿರುವುದರಿಂದ ಕೇಂದ್ರಸರ್ಕಾರಕ್ಕೆ ಕಳುಹಿಸಬೇಕಾದ ಅವಶ್ಯಕತೆ ಇಲ್ಲ. ಇದರ ಬಗ್ಗೆ ಅಂದಾಜು ಪಟ್ಟಿ ಮೊದಲಾದ ಪೂರ್ವಬಾವಿ ಕೆಲಸಕಾರ್ಯಗಳೆಲ್ಲಾ ನಮಗೆ ತಿಳಿದ ಮಟ್ಟಿಗೆ ಪೂರ್ತಿಯಾಗಿವೆ. ಆದ್ದರಿಂದ ಈ ವರ್ಷವೇ ಈ ಕೆಲಸವನ್ನು ಪ್ರಾರಂಭಮಾಡುವುದಕ್ಕೆ ಮೂರನೇ ಒಂದು ಭಾಗದ ಅನುದಾನವನ್ನು ಮಂಜೂರು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಈಸಾರಿ ಹಣವನ್ನು ಕೊಡುವುದರ ಮೂಲಕ ಕೆಲಸವನ್ನು ಪ್ರಾರಂಭಮಾಡಿಸುತ್ತೇವೆ.

## ಮುಲ್ಕಿಯಲ್ಲಿರುವ ನ್ಯಾಯಾಲಯ

೪೭೩. ಶ್ರೀ ಸೋಮಪ್ಪ ಸುವರ್ಣ (ಮೂಡಬಿದ್ರೆ).— ಮಾನ್ಯ ಯೋಜನಾ, ಕಾನೂನು ಹಾಗೂ ಸಂಸದೀಯ ವ್ಯವಹಾರಗಳು ಮತ್ತು ಪ್ರವಾಸೋದ್ಯಮ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮುಲ್ಕಿಯಲ್ಲಿದ್ದ ನ್ಯಾಯಾಲಯವನ್ನು ಕಾರ್ಕಳಕ್ಕೆ ಸ್ಥಳಾಂತರ ಮಾಡಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಆ) ಇದರಿಂದಾಗಿ ಮುಲ್ಕಿಯ ಜನತೆಗೆ ತೊಂದರೆಯಾಗಿರುವುದು ನಿಜವೆ ?

ಇ) ಹಾಗಿದ್ದಲ್ಲಿ ಈ ನ್ಯಾಯಾಲಯವನ್ನು ಪುನಃ ಮುಲ್ಕಿಗೆ ವರ್ಗಾಯಿಸಲು ಅಥವಾ ಹೊಸ ನ್ಯಾಯಾಲಯವನ್ನು ಪ್ರಾರಂಭಿಸಲು ಸರ್ಕಾರವು ಕ್ರಮ ಕೈಕೊಳ್ಳುವುದೆ ?

ಶ್ರೀ ಎಂ. ವೀರಪ್ಪ ಮೊಯ್ಲಿ (ಯೋಜನಾ, ಕಾನೂನು ಹಾಗೂ ಸಂಸದೀಯ ವ್ಯವಹಾರ ಮಂತ್ರಿಗಳು) —

ಅ) ಬಂದಿಲ್ಲ.

ಆ) ಮೇಲ್ಕಂಡ 'ಅ' ಪ್ರಶ್ನೆಯ ಉತ್ತರದಿಂದ, ಈ ಪ್ರಶ್ನೆಯು ಉದ್ಭವಿಸುವುದಿಲ್ಲ.

ಇ) ಕಾರ್ಕಳದಲ್ಲಿರುವ ನ್ಯಾಯಾಲಯವನ್ನು ಮುಲ್ಕಿಗೆ ವರ್ಗಾಯಿಸುವ ಪ್ರಸ್ತಾವನೆಯು ಸರ್ಕಾರದ ಮುಂದಿಲ್ಲ. ಹೊಸ ನ್ಯಾಯಾಲಯವನ್ನು ಮುಲ್ಕಿಯಲ್ಲಿ ಪ್ರಾರಂಭಿಸುವ ಪ್ರಶ್ನೆಯನ್ನು ಪರಿಶೀಲಿಸುತ್ತಿದೆ.

ಶ್ರೀ ಕೆ. ಸೋಮಪ್ಪ ಸುವರ್ಣ.—ಮುಲ್ಕಿಯಲ್ಲಿ ಬ್ರಿಟಿಷರ ಕಾಲದಲ್ಲಿ ಒಂದು ನ್ಯಾಯಾಲಯ ಇತ್ತು. ಆದರೆ ಕಾರಣಾಂತರದಿಂದ ಆ ನ್ಯಾಯಾಲಯ ನಿಂತುಹೋಗಿತ್ತು. ಹಿಂದೆ ಮಾನ್ಯ ದೇವರಾಜ ಅರಸ್‌ರವರು ಮುಖ್ಯಮಂತ್ರಿಗಳಾಗಿದ್ದಾಗ ಮುಲ್ಕಿಯಲ್ಲಿ ಒಂದು ನ್ಯಾಯಾಲಯವನ್ನು ತೆರೆಯಬೇಕೆಂದು ನಿರ್ಧರಿಸಿದರು. ಸ್ಥಳಗಳ ಪರಿಶೀಲನಾ ಕಾರ್ಯವೂ ಕೂಡ ನಡೆದಿತ್ತು. ಆದರೆ ಕಾರಣಾಂತರಗಳಿಂದ ಯೋಗ್ಯ ಕಟ್ಟಡಗಳು ಸಿಕ್ಕದೇ ಹೋದ ಪ್ರಯುಕ್ತ ಈ ನ್ಯಾಯಾಲಯ ಅಲ್ಲಿಗೆ ಬರಲಿಲ್ಲ. ಈಗ ಸಮಯ ಒಳ್ಳೆಯದೂ ಬಂದಿದೆ. ತಾವೇ ಆ ಜಿಲ್ಲೆಯ ಮಂತ್ರಿಗಳಾಗಿದ್ದೀರಿ.

೪೫ ಕಿಲೋಮೀಟರ್ ದೂರದ ಕಾರ್ಕಳಕ್ಕೆ ನಮ್ಮ ಜನರು ಈ ನ್ಯಾಯಾಲಯಕ್ಕೋಸ್ಕರ ಹೋಗಿ ಬರುವುದಕ್ಕೆ ತುಂಬಾ ತೊಂದರೆ ಪಡುತ್ತಿದ್ದಾರೆ. ನಮ್ಮ ಮುಲ್ಕಿ ವಲಯದಲ್ಲಿ ಅನೇಕ ಕೇಸುಗಳು ಇವೆ. ಒಂದು ನ್ಯಾಯಾಲಯವನ್ನು ಸ್ಥಾಪಿಸುವ ಕೇಸುಗಳು ಅಲ್ಲಿವೆ. ಆದ್ದರಿಂದ ಆದಷ್ಟುಬೇಗ ಮುಲ್ಕಿಯಲ್ಲಿ ನ್ಯಾಯಾಲಯವನ್ನು ಪ್ರಾರಂಭಿಸುವ ಬಗ್ಗೆ ಸರ್ಕಾರದ ನಿರ್ಧಾರ ಏನು ಎಂಬುದನ್ನು ತಿಳಿಸಬೇಕೆಂದು ಮಾನ್ಯ ಅಧ್ಯಕ್ಷರ ಮೂಲಕ ವಿನಂತಿಸಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪಮೊಯ್ಲಿ.—ಮಾನ್ಯ ಅಧ್ಯಕ್ಷರೆ, ಬ್ರಿಟಿಷರ ಕಾಲದಲ್ಲಿ ಅಲ್ಲಿ ಕೋರ್ಟ್ ಇತ್ತೋ ಇಲ್ಲವೋ ಎಂಬ ಬಗ್ಗೆ ಸಂಶೋಧನೆಯನ್ನು ನಾವು ಮಾಡಿಲ್ಲ. ಆದರೆ ಈಗತಾನೇ ಮಾನ್ಯ ಸದಸ್ಯರಾದ ಸಿದ್ದನಗೌಡರ್‌ರವರು ಇದೇರೀತಿಯ ನ್ಯಾಯಾಲಯವನ್ನು ತಮ್ಮ ತಾಲ್ಲೂಕ್ ಕೇಂದ್ರದಲ್ಲೂ ತೆಯಬೇಕೆಂಬ ಬಗ್ಗೆ ಪ್ರಸ್ತಾಪ ಮಾಡಿದ್ದನ್ನು ಮಾನ್ಯ ಸದಸ್ಯರು ಕೇಳಿದ್ದಾರೆ ಹೀಗೆ ಅನೇಕ ತಾಲ್ಲೂಕು ಕೇಂದ್ರಗಳಲ್ಲೇ ನ್ಯಾಯಾಲಯ ಇಲ್ಲದಿರುವಾಗ ಇನ್ನು ಹೋಬಳಿ ಮಟ್ಟದಲ್ಲಿ ನ್ಯಾಯಾಲಯವನ್ನು ತೆರೆಯಲು ಸಾಧ್ಯವೇ ಎಂಬುದನ್ನು ಮಾನ್ಯ ಸದಸ್ಯರು ತಿಳಿದುಕೊಳ್ಳಬೇಕು. ಹೋಬಳಿ ಕೇಂದ್ರದಲ್ಲಿ ನ್ಯಾಯಾಲಯವನ್ನು ತೆರೆಯಲು ಸಾಧ್ಯವಿಲ್ಲವೆಂದು ಹೈಕೋರ್ಟ್‌ನವರು ಪ್ರಸ್ತಾಪ ಮಾಡಿದ್ದಾರೆ. ಅಲ್ಲದೆ ಮುಲ್ಕಿಯಲ್ಲಿ ಕೋರ್ಟ್‌ನ್ನು ಮಾಡುವುದಕ್ಕಾಗುವುದಿಲ್ಲವೆಂದು ಅವರು ಬರೆದಿದ್ದಾರೆ. ತಾವು ಅಲ್ಲಿ ಸಾಕಷ್ಟು ಕೇಸ್‌ಗಳಿವೆ ಎಂದು ಹೇಳುತ್ತಿರುವುದರಿಂದ ಇನ್ನೊಂದುಸಾರಿ ಹೈಕೋರ್ಟ್‌ನವರಿಗೆ ಒಂದು ಪತ್ರವನ್ನು ಬರೆಯಬಹುದಷ್ಟೆ. ಒಂದು ಮಾತಿನಲ್ಲಿ ಹೇಳುವುದಾದರೆ ನಮ್ಮ ಇಡೀ ಕರ್ನಾಟಕದ ಚಿತ್ರವನ್ನು ನೋಡಿದರೆ ತಾಲ್ಲೂಕು ಕೇಂದ್ರಗಳಲ್ಲಿ ಎಲ್ಲೂ ಕೂಡ ಕೋರ್ಟ್‌ಗಳು ಇಲ್ಲದಿರುವಾಗ ಅಂಥಾದ್ದರಲ್ಲಿ ಹೋಬಳಿ ಕೇಂದ್ರದಲ್ಲಿ ಕೋರ್ಟ್‌ನ್ನು ತೆರೆಯುತ್ತಾರೋ ಅಥವಾ ಇಲ್ಲವೋ ಎಂದು ನಮಗೆ ಹೇಳುವುದಕ್ಕೆ ಬರುವುದಿಲ್ಲ.

## ಕಲಾಸಿ ಪಾಳ್ಯಂ ಬಸ್ ನಿಲ್ದಾಣವನ್ನು ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ತೆಗೆದುಕೊಳ್ಳುವ ಬಗ್ಗೆ

೪೭೮ ಶ್ರೀ ಪೆರಿಕಾಲ್ ಎಂ. ಮುಲ್ಲಪ್ಪ, (ಚಿಕ್ಕಪೇಟೆ).—ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರಿನ ಕಲಾಸಿಪಾಳ್ಯಂ ಬಸ್ ನಿಲ್ದಾಣವನ್ನು ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯವರು ನಗರ ಕಾರ್ಪೊರೇಷನ್‌ನಿಂದ ತೆಗೆದುಕೊಳ್ಳುವ ಪ್ರಸ್ತಾವನೆ ಏನಾದರೂ ಇದೆಯೇ ?

ಆ) ಹಾಗಿದ್ದಲ್ಲಿ ಈ ಬಸ್ ನಿಲ್ದಾಣವನ್ನು ಕಾರ್ಪೊರೇಷನ್‌ನಿಂದ ಸಾರಿಗೆ ಸಂಸ್ಥೆಗೆ ತೆಗೆದುಕೊಳ್ಳಲು ಜರೂರು ಕ್ರಮ ತೆಗೆದುಕೊಳ್ಳಲಾಗುವುದೇ ?

ಇ) ಕಲಾಸಿಪಾಳ್ಯಂ ಬಸ್ ನಿಲ್ದಾಣವನ್ನು ಸಂಪೂರ್ಣವಾಗಿ ನವೀಕರಿಸಿ ಅಭಿವೃದ್ಧಿಪಡಿಸಿ, ನಗರ ಸಾರಿಗೆ ಹಾಗೂ ಗ್ರಾಮಾಂತರ ಸಾರಿಗೆ ಬಸ್ ನಿಲ್ದಾಣವನ್ನು ಕಟ್ಟಲು ಯೋಚಿಸಲಾಗಿದೆಯೇ ?

ಈ) ಅಲ್ಲಿಯವರೆಗೆ ಈ ನಿಲ್ದಾಣವನ್ನು ಶುಚಿಯಾಗಿಟ್ಟು ಪ್ರಯಾಣಿಕರಿಗೆ ಅನುಕೂಲ ಮಾಡಿ ಕೊಡಲು ಕ್ರಮ ತೆಗೆದುಕೊಳ್ಳಲಾಗುವುದೇ ?

ಉ) ಹಾಗಿದ್ದಲ್ಲಿ, ಏನೇನು ಕ್ರಮ ತೆಗೆದುಕೊಳ್ಳಲಾಗುವುದು ? ಎಷ್ಟು ಅವಧಿಯಲ್ಲಿ ಕ್ರಮ ತೆಗೆದುಕೊಳ್ಳಲಾಗುವುದು ?

ಶ್ರೀ ಕೆ. ಜೆ. ಜಾರ್ಜ್ (ಸಾರಿಗೆ ಮಂತ್ರಿಗಳು).—

ಅ) ಇದೆ

ಆ) ಈ ಪ್ರಸ್ತಾವನೆಯು ವಿಚಾರ ವಿನಿಮಯದ ಪ್ರಾಥಮಿಕ ಹಂತದಲ್ಲಿದೆ.

ಇ) ಕಲಾಸಿಪಾಳ್ಯಂ ಬಸ್ ನಿಲ್ದಾಣವನ್ನು ಸ್ವಾಧೀನ ಮಾಡಿಕೊಂಡ ನಂತರ ಸೂಕ್ತ ತೀರ್ಮಾನ ತೆಗೆದುಕೊಳ್ಳಲಾಗುವುದು.

ಈ) ಬೆಂಗಳೂರು ಮಹಾನಗರಪಾಲಿಕೆಯು ಅಲ್ಲಿಯವರೆಗೆ ಈ ಬಗ್ಗೆ ಸೂಕ್ತ ಕ್ರಮತೆಗೆದು ಕೊಳ್ಳುವುದು.